## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ 199/2025

| | | |
|---|---|---|
| ಸಾಕ್ಷಿದಾರರ ಹೆಸರು | : ಸಂತೋಷ ಕುಮಾರ್ | **ಪಿಡಬ್ಲ್ಯೂ: 4** |
| ತಂದೆಯ ಹೆಸರು | : ಕೃಷ್ಣೇಗೌಡ | **ಸಿಡಬ್ಲ್ಯೂ: 31** |
| ವಯಸ್ಸು | : 46 ವರ್ಷ | |
| ಉದ್ಯೋಗ | : ಎಚ್.ಸಿ–390 ಹೆಬ್ಬಾಳ ಪೊಲೀಸ್ ಠಾಣೆ | |
| ವಾಸಸ್ಥಳ | : ಮಾದಗಳ್ಳಿ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 23.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2017 ರಿಂದ ಜುಲೈ 2024 ರವರೆಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಎಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಆಗ ತನಿಖಾ ಸಹಾಯಕನ್ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿನಾಂಕ 14.12.2022 ರಂದು ಮೊಕದ್ದಮೆ ಸಂ.140/2022 ರಲ್ಲಿ ನಾನು ತನಿಖಾಧಿಕಾರಿಯವರ ಜೊತೆಗೆ ಗುಮನಂ ಶಾವಳ್ಳಿ ಗುಡ್ಡದ ಬಳಿ ಹೋಗಿ ಅಲ್ಲಿ ತನಿಖಾಧಿಕಾರಿಯವರು ಮಹಜರ್ ಜರುಗಿಸಿದ್ದು ಆ ಕಾಲದಲ್ಲಿ ನಾನು ನನ್ನ ಸ್ಯಾಮಸಂಗ್ ಮೊಬೈಲ್ ನಿಂದ ಮಹಜರ್ ಕ್ರಮದ ಪೋಟೋವನ್ನು ತೆಗೆದಿರುತ್ತೇನೆ.

3. ದಿನಾಂಕ 15.12.2022 ರಂದು ತನಿಖಾಧಿಕಾರಿಯವರ ಜೊತೆಗೆ ಸೆಂಟ್ ಪಿಲೋಮಿನ್ ಕಾಲೇಜಿನ ಎದುರುಗಡೆ ಚಾಕು ಅಮಾನತ್ತು ಜರುಗಿಸಿದ್ದು ಆ ಸಮಯದಲ್ಲಿ

ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ಫೋಟೋಗಳನ್ನು ನನ್ನ ಸ್ಯಾಮಸಂಗ್ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ಮಂಡಿ ಪೊಲೀಸ್ ಠಾಣೆಯಲ್ಲಿ ತನಿಖಾಧಿಕಾರಿಯವರು ಒಂದು ಚಾಕುವನ್ನು ಅಮಾನತ್ತು ಪಡಿಸಿಕೊಂಡಿದ್ದು, ಮಹಜರ್ ಕಾಲದಲ್ಲಿ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ನನ್ನ ಸ್ಯಾಮಸಂಗ್ ಮೊಬೈಲ್ ನಿಂದ ಒಂದು ಫೋಟೋವನ್ನು ತೆಗೆದಿರುತ್ತೇನೆ. ನಂತರ ಠಾಣೆಯಲ್ಲಿದ್ದ ಕಂಪ್ಯೂಟರ್ ನಲ್ಲಿ ನನ್ನ ಮೊಬೈಲ್ ನಲ್ಲಿದ್ದ ಫೋಟೋಗಳನ್ನು ಅಳವಡಿಸಿ ಅವುಗಳನ್ನು ಎಫ್ ಸಾನ್ ಎಲ್–380 ಕಲರ್ ಪ್ರಿಂಟರ್ ನಿಂದ ಪ್ರಿಂಟ್ ಹಾಕಿ ಫೋಟೋಗಳನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ನಂತರ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸಾಕ್ಷಿಯು ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–28** ಎಂದು, ಸಾಕ್ಷಿ ಸಹಿಯನ್ನು **ನಿಪಿ–28(ಎ)** ಎಂದು ಗುರುತಿಸಲಾಯಿತು. ನಾನು ಫೋಟೋಗಳನ್ನು ತೆಗೆಯುವಾಗ ಮತ್ತು ಫೋಟೋಗಳನ್ನು ಪ್ರಿಂಟ್ ಹಾಕುವಾಗ ನನ್ನ ಮೊಬೈಲ್ ಮತ್ತು ಠಾಣೆಯಲ್ಲಿದ್ದ ಕಂಪ್ಯೂಟರ್ ಮತ್ತು ಪ್ರಿಂಟರ್ ಸುಸ್ಥಿತಿಯಲ್ಲಿದ್ದವು. ನಾನು ತೆಗೆದ ಫೋಟೋಗಳನ್ನು ನೋಡಿದರೇ ಗುರುತಿಸಬಲ್ಲೆ. ಗುಮನಂ ಶಾಹ ವಾಲಿ ಗುಡ್ಡದ ಬಳಿ ತೆಗೆದ ಫೋಟೋಗಳನ್ನು ನೋಡಿದರೇ ಗುರುತಿಸಬಲ್ಲೆ. ಸಾಕ್ಷಿ ನಿಪಿ–9 ರಲ್ಲಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಠಾಣೆಯಲ್ಲಿ ತೆಗೆದ ಫೋಟೋಗಳಾದ ನಿಪಿ–11 ಮತ್ತು ನಿಪಿ–17 ನೋಡಿ ಗುರುತಿಸಿರುತ್ತಾರೆ. ಸೆಂಟ್ ಪಿಲೋಮಿನ ಕಾಲೇಜ್ ಬಳಿ ತೆಗೆದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–18 ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ 3 ನೇ ಆರೋಪಿತರ ಪರ ವಕೀಲರಿಂದಃ</u>**

4. ಸದರಿ ಪ್ರಮಾಣ ಪತ್ರವನ್ನು ಯಾವ ದಿನಾಂಕ ತಯಾರಿಸಿದ್ದು ಮತ್ತು ಅದನ್ನು ತನಿಖಾಧಿಕಾರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ದಿನಾಂಕ 21.12.2022 ರಂದು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಈಗ ಮೇಲೆ ಹೇಳಿದ ದಿನಾಂಕ ಪ್ರಮಾಣ ಪತ್ರದಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿ. ನೀವು ನಿಮ್ಮ ಸ್ಯಾಮಸಂಗ್ ಮೊಬೈಲ್ ನಿಂದ ಪೋಟೋಗಳನ್ನು ತೆಗೆದಿರುತ್ತೇನೆ ಎಂದು ಹೇಳಿದ್ದು, ಆದರೆ ಪ್ರಮಾಣ ಪತ್ರದಲ್ಲಿ ಸ್ಯಾಮಸಂಗ್ ಗ್ಯಾಲಕ್ಸಿ ಎ–71 ಎಂದು ನಮೂದಿಸಿದ್ದು ಅದರ ಐ.ಎಂ.ವಿ ನಂಬರ್ ನಮೂದಿಸಿರುವುದಿಲ್ಲ ಎಂದರೆ ಸರಿ. ಮೇಲೆ ನಿಶಾನೆಯಾಗಿ ಗುರುತಿಸಿದ ಪೋಟೋಗಳನ್ನು ಯಾವ ಯಾವ ದಿನಾಂಕದಂದು ಯಾವ ಯಾವ ಪೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸಾಕ್ಷಿ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಪೋಟೋಗಳ ಆ್ಯಶ್ ವ್ಯಾಲ್ಯೂ ವನ್ನು ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಪೋಟೋಗಳನ್ನು ಯಾವತ್ತೂ, ಯಾವ ದಿನಾಂಕದಂದು ಕಂಪ್ಯೂಟರ್ ನಿಂದ ಪ್ರಿಂಟ್ ಹಾಕಲಾಗಿದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಕಂಪ್ಯೂಟರ್ ಉಪಯೋಗಿಸುವ ಬಗ್ಗೆ ನಮಗೆ ತರಭೇತಿಯಲ್ಲಿ ಹೇಳಿ ಕೊಟ್ಟಿರುತ್ತಾರೆ. ನಾನು ತರಭೇತಿ ಪಡೆದ ಬಗ್ಗೆ ಪ್ರತ್ಯೇಕವಾಗಿ ಸರ್ಟಿಪಿಕೆಟ್ ತನಿಖಾಧಿಕಾರಿಯವರಿಗೆ ನೀಡಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ಕಂಪ್ಯೂಟರ್ ಯಾವ ಕಂಪನಿಯಲ್ಲಿ, ಮೊಡೆಲ್, ಅದರ ಕ್ಯಾಪಸಿಟಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಠಾಣೆಯಲ್ಲಿರುವ ಕಂಪ್ಯೂಟರ್ ಅನ್ನು ಬೇರೆಯವರು ಸಹ ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ಸದರಿ

ಕಂಪ್ಯೂಟರ್ ನ್ನು ನಾನು ತನಿಖಾ ಸಹಾಯಕನಾದ್ದರಿಂದ ಒಬ್ಬನೇ ಉಪಯೋಗಿಸುತ್ತೇನೆ. ತನಿಖಾ ಸಹಾಯಕರಾಗಿ ಬೇರೆ ಸಿಬ್ಬಂಧಿಗಳು ಸಹ ಹೋಗುತ್ತಿದ್ದು ಅವರು ಸಹ ಸದರಿ ಕಂಪ್ಯೂಟರ್ ನ್ನು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಇಲ್ಲದೇ ಇರುವಾಗ ಸದರಿ ಕಂಪ್ಯೂಟರ್ ಅನ್ನು ಬೇರೆಯವರು ಉಪಯೋಗಿಸುತ್ತಾರೆ ಎಂದರೆ ಸರಿ. ಸ್ಯಾಮಸಂಗ್ ಮೊಬೈಲ್ ನ್ನು ಠಾಣೆ ಕಂಪ್ಯೂಟರಿಗೆ ಯುಎಸ್ ಬಿ ಕೇಬಲ ಮುಖಾಂತರ ಅಳವಡಿಸಿರುತ್ತೇನೆ ಎಂದು ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಿಂಟರಿನ ಮೊಡೆಲ್ ಮತ್ತು ಅದರ ಸುಸ್ಥಿತಿಯಲ್ಲಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೊಬೈಲ್, ಕಂಪ್ಯೂಟರ್ ಮತ್ತು ಪ್ರಿಂಟರ್ ಗಳು ಸುಸ್ಥಿತಿಯಲ್ಲಿದ್ದ ಬಗ್ಗೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊಬೈಲ್ ನಿಂದ ಪೋಟೋಗಳನ್ನು ತೆಗೆದಿರುವುದಿಲ್ಲ, ಅವುಗಳನ್ನು ಕಂಪ್ಯೂಟರರಿಗೆ ಅಳವಡಿಸಿ ಪ್ರಿಂಟರ್ ನಿಂದ ಪ್ರಿಂಟ್ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ತಾಂತ್ರಿಕತೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ, ತನಿಖಾಧಿಕಾರಿಯವರ ಹೇಳಿಕೆಯ ಮೇರೆಗೆ ಸುಳ್ಳು ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರ ಕಲಂ **65** ಬಿ ಸಾಕ್ಷ್ಯ ಅಧಿನಿಯಮದ ಪೂರಕವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಅರ್ಹತೆ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇ ಎ ಒ**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**